# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 624 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20.08.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿಟ್‌ಕಾಯಿನ್ ಪ್ರಕರಣದ ತನಿಖೆ ಆರಂಭಗೊಂಡಿದ್ದು ಯಾವಾಗ; ಒಟ್ಟು ಎಷ್ಟು ಬಿಟ್ ಕಾಯಿನ್‌ಗಳು ಕಳುವಾಗಿದೆ; ಇದರ ಮೌಲ್ಯ ಎಷ್ಟು; (ಸಮಗ್ರ ಮಾಹಿತಿ ನೀಡುವುದು) | ಬಿಟ್‌ಕಾಯಿನ್ ಪ್ರಕರಣದ ತನಿಖೆಯನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 48 ಸಿಒಡಿ 2023(2), ದಿನಾಂಕ: 30.06.2023 ರಲ್ಲಿ ವಿಶೇಷ ತನಿಖಾ ತಂಡ (ಬಿಟ್ ಕಾಯಿನ್) ರಚಿಸಿ ಆದೇಶಿಸಲಾಗಿರುತ್ತದೆ.<br><br>ಕಾಟನ್ ಪೇಟೆ ಪೊಲೀಸ್ ಠಾಣೆಯ ಮೊ.ಸಂ. 153/2020ರ ಪ್ರಕರಣದಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಗಳು ಭಾಗಿಯಾಗಿರುವ ಸಾಧ್ಯತೆ ಹಿನ್ನಲೆಯಲ್ಲಿ ಆರೋಪಿಗಳು ಸೈಬರ್ ವಿಷಯಗಳಲ್ಲಿ ಪರಿಣಿತರಿದ್ದು, ಬಿಟ್‌ಕಾಯಿನ್ ಮತ್ತು ಡಾರ್ಕ್‌ನೆಟ್‌ಗಳಲ್ಲಿ ವ್ಯವಹಾರ ಮಾಡಿರುವ ಮಾಹಿತಿಯಿರುವ ಮೇರೆಗೆ ಈ ಎಲ್ಲಾ ವಿಷಯಗಳಲ್ಲಿ ಸಮಗ್ರ ತನಿಖೆ ಕೈಗೊಳ್ಳುವ ಸಲುವಾಗಿ ರಾಜ್ಯ ಸರ್ಕಾರ ರಚಿಸಿದ ವಿಶೇಷ ತನಿಖಾ ತಂಡಕ್ಕೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾದ 09 ಪ್ರಕರಣಗಳನ್ನು ಎಸ್‌ಐಟಿ ಯಿಂದ ತನಿಖೆ ಕೈಗೊಳ್ಳಲಾಗಿರುತ್ತದೆ.<br><br>ಶ್ರೀ ಹರೀಶ್ ಬಿ.ವಿ. ಫಿರ್ಯಾದುದಾರರಾದ ಇವರು ಸುಮಾರು 60.06 ಬಿಟ್ ಕಾಯಿನ್ ಗಳು ಕಳುವಾಗಿರುವ ಬಗ್ಗೆ ನೀಡಿರುವ ದೂರಿನ ಆಧಾರದ ಮೇರೆಗೆ ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ದಾಖಲಾದ ಮೊ.ಸಂಖ್ಯೆ: 85/2017 ಪ್ರಕರಣದಲ್ಲಿ ಕಳುವಾದ ಬಿಟ್‌ಕಾಯಿನ್ ಮೊತ್ತವು ಅಂದಿನ ಮಾರುಕಟ್ಟೆ ಮೌಲ್ಯ ಒಟ್ಟು 1,14,00,000/- (ಒಂದು ಕೋಟಿ ಹದಿನಾಲ್ಕು ಲಕ್ಷ) ರೂಪಾಯಿಗಳಾಗಿರುತ್ತದೆ. |

| | | |
|---|---|---|
| | | ಉಳಿದ ಯಾವುದೇ ಪ್ರಕರಣಗಳಲ್ಲಿ ಬಿಟ್ ಕಾಯಿನ್ ಕಳುವಾಗಿರುವ ಬಗ್ಗೆ ನಿರ್ದಿಷ್ಟ ಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿರುವುದಿಲ್ಲ. |
| ಆ) | ಪೊಲೀಸ್ ಅಧಿಕಾರಿ/ಸಿಬ್ಬಂದಿಗಳೂ ಸೇರಿದಂತೆ ಪ್ರಕರಣದಲ್ಲಿ ಈವರೆಗೆ ಎಷ್ಟು ಜನರನ್ನು ಬಂಧಿಸಲಾಗಿದೆ; ಬಂಧಿತರ ವಿರುದ್ಧ ಹೂಡಿರುವ ಪ್ರಕರಣಗಳ ಮಾಹಿತಿ ನೀಡುವುದು; ಪೊಲೀಸ್ ಅಧಿಕಾರಿಗಳ ವಿರುದ್ಧ ಇರುವ ಆರೋಪಗಳೇನು; | ಪೊಲೀಸ್ ಅಧಿಕಾರಿ/ಸಿಬ್ಬಂದಿಗಳೂ ಸೇರಿದಂತೆ ಪ್ರಕರಣದಲ್ಲಿ ಈವರೆಗೆ ಬಂಧಿಸಲಾದ ಆರೋಪಿಗಳ ವಿವರ, ಬಂಧಿತರ ವಿರುದ್ಧ ಹೂಡಿರುವ ಪ್ರಕರಣಗಳ ಮಾಹಿತಿಯನ್ನು **<u>ಅನುಬಂಧ-1</u>**ರಲ್ಲಿ ಒದಗಿಸಲಾಗಿದೆ.<br><br>**<u>ಪೊಲೀಸ್ ಅಧಿಕಾರಿಗಳ ವಿರುದ್ಧ ಇರುವ ಆರೋಪಗಳು:-</u>**<br><br>ಸಿಸಿಬಿಯ ಹಿಂದಿನ ತನಿಖಾಧಿಕಾರಿಗಳು ಕೆ.ಜಿ ನಗರ ಪೊಲೀಸ್ ಠಾಣೆ ಮೊ.ಸಂಖ್ಯೆ:91/2020 ಪ್ರಕರಣದಲ್ಲಿ ಆರೋಪಿ ಶ್ರೀ ಕೃಷ್ಣ @ ಶ್ರೀಕಿ ಮತ್ತು ಇತರೆ ಆರೋಪಿಗಳಿಂದ ಅಮಾನತ್ತುಪಡಿಸಿಕೊಂಡ ಎಲೆಕ್ಟ್ರಾನಿಕ್ ಮತ್ತು ಇತರೆ ಉಪಕರಣಗಳನ್ನು ಕಾನೂನು ಬಾಹಿರವಾಗಿ ಬಳಸಿ ಹೆಚ್ಚುವರಿ ಫೈಲ್ ಗಳನ್ನು ಸೃಷ್ಟಿಸುವ ಮುಖಾಂತರ ಸಾಕ್ಷ್ಯಧಾರಗಳನ್ನು ತಿರುಚುವ ಹಾಗೂ ನಾಶ ಪಡಿಸಿರುವುದರ ಆರೋಪಗಳಿಗೆ ಸಂಬಂಧಿಸಿದಂತೆ ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂಖ್ಯೆ:302/2023ರ ಪ್ರಕರಣವು ದಾಖಲಾಗಿರುತ್ತದೆ.<br><br>ಕೆ.ಜಿ ನಗರ ಪೊಲೀಸ್ ಠಾಣೆ ಮೊ.ಸಂಖ್ಯೆ:91/2020 ಪ್ರಕರಣದ ತನಿಖಾ ಕಾಲದಲ್ಲಿ ಅಂದಿನ ತನಿಖಾಧಿಕಾರಿಯಾದ ಶ್ರೀಧರ್ ಪೂಜಾರ್ ಪೊಲೀಸ್ ಇನ್ಸ್ ಪೆಕ್ಟರ್, ಸಿಸಿಬಿ, ಬೆಂಗಳೂರು ರವರು ಆರೋಪಿ ಶ್ರೀ ಕೃಷ್ಣ @ ಶ್ರೀಕಿ ಮತ್ತು ರಾಬಿನ್ ಖಂಡೇಲ್ ವಾಲ ರವರನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಿರುವ ಬಗ್ಗೆ ಮತ್ತು ಆರೋಪಿಗಳಿಂದ ಬಿಟ್ ಕಾಯಿನ್‌ಗಳನ್ನು ಅಕ್ರಮ ವರ್ಗಾವಣೆ ಮಾಡಿಕೊಳ್ಳಲು ಪ್ರಯತ್ನಿಸಿರುವುದಕ್ಕೆ ಸಂಬಂಧಿಸಿದಂತೆ ಸಿಐಡಿ ಸಿಸಿಪಿಎಸ್ ಮೊ.ಸಂಖ್ಯೆ:01/2024 ರಲ್ಲಿ ಪ್ರಕರಣ ದಾಖಲಾಗಿರುತ್ತದೆ. |
| ಇ) | ಪ್ರಕರಣದಲ್ಲಿ ಇ.ಡಿ. ಪ್ರವೇಶವಾಗಿರುವುದು ಸರ್ಕಾರದ ಗಮನದಲ್ಲಿದೆಯೇ;<br><br>ಇ.ಡಿ. ಮತ್ತು ಎಸ್.ಐ.ಟಿ ತನಿಖೆಯಲ್ಲಿನ ಪ್ರಗತಿಯ ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು; | ಇ.ಡಿ ತನಿಖಾ ಪ್ರಕರಣವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಆದ್ದರಿಂದ ಅನ್ವಯಿಸುವುದಿಲ್ಲ.<br><br>ವಿಶೇಷ ತನಿಖಾ ತಂಡ ಎಸ್.ಐ.ಟಿ ಯಲ್ಲಿ ತನಿಖೆಯಲ್ಲಿದ್ದ ಎಲ್ಲಾ 09 ಪ್ರಕರಣಗಳಲ್ಲಿ |

| | | |
|---|---|---|
| ಈ) | ಎಸ್.ಐ.ಟಿ. ತನಿಖೆ ಯಾವ ಹಂತದಲ್ಲಿದೆ; ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ ಆಗಿದೆಯೇ; ದೋಷಾರೋಪ ಪಟ್ಟಿಯಲ್ಲಿರುವ ಅಂಶಗಳೇನು; | ಈಗಾಗಲೇ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ. ಅವುಗಳ ಇತ್ತೀಚಿನ ಹಂತದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಉ) | ಈ ಪ್ರಕರಣದಿಂದ ಪೊಲೀಸರನ್ನು ಕೈಬಿಡಲಾಗಿದೆಯೇ; ಕೈಬಿಡುವ ಮುನ್ನ ಆರೋಪಗಳ ಕುರಿತು ಸರ್ಕಾರ ಸಮಗ್ರ ತನಿಖೆ ನಡೆಸಿದೆಯೇ? (ವಿವರ ನೀಡುವುದು) | ಸಿಐಡಿ, ಸಿಸಿಪಿಎಸ್ ಪೊಲೀಸ್ ಠಾಣೆ ಮೊ.ಸಂಖ್ಯೆ:01/2024 ರ ಪ್ರಕರಣದ ತನಿಖಾ ಕಾಲದಲ್ಲಿ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳಿಂದ, ಸಾಕ್ಷಿದಾರರುಗಳ ಹೇಳಿಕೆಗಳಿಂದ ಮತ್ತು ತಾಂತ್ರಿಕ ವರದಿ ಹಾಗೂ ಇತ್ಯಾಧಿಗಳಿಂದ ಪೊಲೀಸ್ ಅಧಿಕಾರಿಗಳಾದ ಪ್ರಶಾಂತ್ ಬಾಬು, ಪೊಲೀಸ್ ಇನ್‌ಸ್ಪೆಕ್ಟರ್, ಶ್ರೀಧರ್ ಕೆ. ಪೂಜಾರ್ ಡಿವೈಎಸ್‌ಪಿ, ಲಕ್ಷ್ಮಿಕಾಂತಯ್ಯ, ಪೊಲೀಸ್ ಇನ್‌ಸ್ಪೆಕ್ಟರ್, ಚಂದ್ರಾಧರ್, ಪೊಲೀಸ್ ಇನ್‌ಸ್ಪೆಕ್ಟರ್ ರವರು ಆರೋಪಿ ಸಂತೋಷ್ ಕುಮಾರ್ ರವರೊಂದಿಗೆ ಶಾಮೀಲಾಗಿ ಶ್ರೀಕಿಯಿಂದ ಅಕ್ರಮವಾಗಿ ಬಿಟ್ ಕಾಯಿನ್ ವರ್ಗಾವಣೆಗೆ ಪ್ರಯತ್ನಿಸಿರುವ ಕುರಿತು ಸದರಿಯವರುಗಳನ್ನು ಅಭಿಯೋಜನೆಗೆ ಒಳಪಡಿಸಲು ಅವಶ್ಯಕವಾದ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡಲು ಸದರಿಯವರ ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸಕ್ಷಮ ಪ್ರಾಧಿಕಾರವು ಆದೇಶ ಸಂಖ್ಯೆ: ಹೆಚ್ ಡಿ 389 ಪಿಇಜಿ 2025, ದಿನಾಂಕ:16.03.2026 ರಲ್ಲಿ ಅಭಿಯೋಜನಾ ಮಂಜೂರಾತಿ ನೀಡಲು ತಿರಸ್ಕರಿಸಿದ ಕಾರಣ ದೋಷಾರೋಪಣ ಪಟ್ಟಿಯಲ್ಲಿ ಪೊಲೀಸ್ ಅಧಿಕಾರಿಗಳನ್ನು ಕೈಬಿಡಲಾಗಿರುತ್ತದೆ.<br><br>ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂಖ್ಯೆ:302/2023 ರ ಪ್ರಕರಣದ ತನಿಖಾ ಕಾಲದಲ್ಲಿ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳಿಂದ, ಸಾಕ್ಷಿದಾರರುಗಳ ಹೇಳಿಕೆಗಳಿಂದ ಮತ್ತು ತಾಂತ್ರಿಕ ವರದಿ ಹಾಗೂ ಇತ್ಯಾದಿಗಳಿಂದ ಪೊಲೀಸ್ ಅಧಿಕಾರಿಗಳಾದ ಪ್ರಶಾಂತ್ ಬಾಬು, ಪೊಲೀಸ್ ಇನ್‌ಸ್ಪೆಕ್ಟರ್, ಶ್ರೀಧರ್ ಕೆ. ಪೂಜಾರ್, ಡಿವೈಎಸ್‌ಪಿ ರವರು ಆರೋಪಿ ಶ್ರೀ ಕೃಷ್ಣ @ ಶ್ರೀಕಿ ಮತ್ತು ಇತರೆ ಆರೋಪಿಗಳಿಂದ ಅಮಾನತ್ತು ಪಡಿಸಿಕೊಂಡ ಎಲೆಕ್ಟ್ರಾನಿಕ್ ಮತ್ತು ಇತರೆ ಉಪಕರಣಗಳನ್ನು ಕಾನೂನು ಬಾಹಿರವಾಗಿ ಬಳಸಿ ಹೆಚ್ಚುವರಿ ಫೈಲ್ ಗಳನ್ನು ಸೃಷ್ಟಿಸುವ ಮುಖಾಂತರ ಸಾಕ್ಷ್ಯ ಧಾರಗಳನ್ನು ತಿರುಚುವ ಹಾಗೂ ನಾಶ ಪಡಿಸಿರುವುದರ ಬಗ್ಗೆ |

| | | |
|---|---|---|
| | | ಸದರಿಯವರುಗಳನ್ನು ಅಭಿಯೋಜನೆಗೆ ಒಳಪಡಿಸಲು ಅವಶ್ಯಕವಾದ ಅಭಿಯೋಜನಾ ಆದೇಶವನ್ನು ನೀಡಲು ಸದರಿಯವರು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸಕ್ಷಮ ಪ್ರಾಧಿಕಾರವು ಆದೇಶ ಸಂಖ್ಯೆ: ಹೆಚ್ ಡಿ 17 ಪಿಇಜಿ 2025, ದಿನಾಂಕ:16.03.2026 ರಲ್ಲಿ ತಿರಸ್ಕರಿಸಿದ ಕಾರಣ ದೋಷಾರೋಪಣ ಪಟ್ಟಿಯಲ್ಲಿ ಪೊಲೀಸ್ ಅಧಿಕಾರಿಗಳನ್ನು ಕೈಬಿಡಲಾಗಿರುತ್ತದೆ. |

ಸಂಖ್ಯೆ: ಹೆಚ್‌ಡಿ 26 ಎಸ್‌ಡಿಎನ್ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು

[illegible] ಸಾ: 624 ಕ್ಕೆ **ಅನುಬಂಧ-1**

| ಕ್ರ ಸಂ. | ಮೊಕದ್ದಮೆ ಸಂಖ್ಯೆ | ಆರೋಪಿಗಳು | ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಸೇರಿದಂತೆ ಪ್ರಕರಣದಲ್ಲಿ ಈವರೆಗೆ ಬಂಧಿಸಲಾದ ವಿವರಗಳು |
|---|---|---|---|
| 1 | ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂ:153/2020 | 1)ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್ ವಾಲ<br>3) ಎ-3 ಸುನೀಶ್ ಹೆಗಡೆ<br>4) ಎ-4 ಪ್ರಸಿದ್ಧ ಶೆಟ್ಟಿ<br>5) ಎ-5 ಸುಜಯ್‌ರಾಜ್ | 1)ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್‌ವಾಲ<br>3) ಎ-3 ಸುನೀಶ್ ಹೆಗಡೆ<br>4) ಎ-4ಪ್ರಸಿದ್ಧ ಶೆಟ್ಟಿ<br>5) ಎ-5 ಸುಜಯ್‌ರಾಜ್<br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಸದರಿಯವರುಗಳು ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. |
| 2 | ಬೆಂಗಳೂರು ನಗರ, ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ: 45/2020 | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್ ವಾಲ<br>3)ಎ-3 ಸುನೀಶ್ ಹೆಗಡೆ | ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್‌ವಾಲ<br>ಮೇಲ್ಕಂಡ ಎ-1 ಮತ್ತು ಎ-2 ಆರೋಪಿಗಳನ್ನು ಈ ಹಿಂದೆ ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಸದರಿಯವರುಗಳು ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ<br>ಎ-3 ಆರೋಪಿಯು ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಪಡೆದಿರುತ್ತಾರೆ. |
| 3 | ಬೆAಗಳೂರು ನಗರ, ಅಶೋಕ ನಗರ ಪೊಲೀಸ್ ಠಾಣೆ ಮೊ.ಸಂ.287/2020 | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್ ವಾಲ<br>3) ಅಜಿತ್ ಖಂಡೇಲ್‌ವಾಲ್ | ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್‌ವಾಲ<br>ಮೇಲ್ಕAಡ ಇಬ್ಬರು ಆರೋಪಿಗಳನ್ನು ಈ ಹಿಂದೆ ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 4 | ಬೆಂಗಳೂರು ನಗರ, ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ.4801/2018 | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ದೀಪಕ್ ಗೌಡ<br>3) ಎ-3 ಸೋಮಶೇಖರ್<br>4) ಎ-4 ವೀರಗಂಗದರಯ್ಯ ಸವದತ್ತಿ ಮಟ್<br>5) ಎ-5 ರಾಜುಗೌಡ | 1)ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2)ಎ-2 ದೀಪಕ್ ಗೌಡ<br>3)ಎ-3 ಸೋಮಶೇಖರ್<br>4)ಎ-4 ವೀರಗಂಗಧರಯ್ಯ ಸವದತ್ತಿಮಟ್<br>5)ಎ-5 ರಾಜುಗೌಡ<br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಸದರಿಯವರುಗಳು ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. |
| 5 | ತುಮಕೂರು ನ್ಯೂ ಎಕ್ಸ್‌ಟೆನ್ಷ್ ಪೊಲೀಸ್ ಠಾಣೆ | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್‌ವಾಲ |

| | | | |
|---|---|---|---|
| | ಮೊ.ಸಂ.85/2017 | 2) ಎ-2 ರಾಬಿನ್ ಖಂಡೇಲ್ ವಾಲ<br>3) ಎ-3 ನಫಿ ಮಹಮ್ಮದ್ ನಾಸರ್<br>4)ಎ-4 ಮಹಮ್ಮದ್ ಹಾರಿಸ್ ನಲಪಾಡ್<br>5)ಎ-5 ವಿಜಯ್.ಎಲ್<br>6)ಎ-6 ಅಯಾಜ್ ಮಹಮ್ಮದ್ (ಅಬೇಟೆಡ್) | ತನಿಖಾ ಕಾಲದಲ್ಲಿ ಸಿಐಡಿಯ ಎಸ್ ಐಟಿ ವಿಚಾರಣೆಯಲ್ಲಿ ಬಂದಿಸಲಾಗಿದೆ.<br>ಎ-3, ಎ-4, ಎ-5 ರವರಿಗೆ 41(ಎ) ಸಿ.ಆರ್.ಪಿ.ಸಿ ನೋಟಿಸ್ ನೀಡಲಾಗಿದ್ದು, ಸದರಿಯವರು ತನಿಖಾಧಿಕಾಯವರ ಮುಂದೆ ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆ ನೀಡಲಾಗಿರುತ್ತಾರೆ. |
| 6 | ಬೆಂಗಳೂರು ನಗರ<br>ಕೆ.ಜಿ.ನಗರ ಪೊಲೀಸ್ ಠಾಣೆ<br>ಮೊ.ಸಂ.91/2020 | 1)ಎ-1 ಸುಜಯ್‌ರಾಜ್<br>2)ಎ-2 ಹೇಮಂತ್ ಮುದ್ದಪ್ಪ<br>3)ಎ-4 ಸುನೀಷ್ ಹೆಗಡೆ<br>4)ಎ-5 ಪ್ರಸಿದ್ಧ ಶೆಟ್ಟಿ<br>5)ಎ-6ಪಂಕಜ್ ಕೊಠಾರಿ<br>6)ಎ-7 ದರ್ಶನ್ ಕುಮಾರ್<br>7)ಎ-8 ಮದನ್ ಮೋಹನ್ ಬಾರಿಕ್<br>8)ಎ-9 ಆಶಿಸ್ ಭಿಮಸೇನ ಮೊಹಾರಿ<br>9)ಎ10 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>10)ಎ-11 ಪ್ರಭಾಕರ್ ಎ.ಜಿ<br>11)ಎ-12 ರಾಬಿನ್ ಖಂಡೇಲ್ ವಾಲ | 1)ಎ-1 ಸುಜಯ್‌ರಾಜ್<br>2)ಎ-2 ಹೇಮಂತ್ ಮುದ್ದಪ್ಪ<br>3)ಎ-4 ಸುನೀಷ್ ಹೆಗಡೆ<br>4)ಎ-5 ಪ್ರಸಿದ್ಧ ಶೆಟ್ಟಿ<br>5)ಎ-6ಪಂಕಜ್ ಕೊಠಾರಿ<br>6)ಎ-7 ದರ್ಶನ್ ಕುಮಾರ್<br>7)ಎ-8 ಮದನ್ ಮೋಹನ್ ಬಾರಿಕ್<br>8)ಎ-9 ಆಶಿಸ್ ಭಿಮಸೇನ ಮೊಹಾರಿ<br>9)ಎ10 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>10)ಎ-11 ಪ್ರಭಾಕರ್ ಎ.ಜಿ<br>11)ಎ-12 ರಾಬಿನ್ ಖಂಡೇಲ್ ವಾಲ<br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ.<br>ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 7 | ಸಿಐಡಿ, ಸಿಸಿಪಿಎಸ್<br>ಮೊ.ಸಂ.09/2019 | 1)ಎ-1 ಶ್ರೀ ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ಸುನೀಷ್ ಹೆಗಡೆ<br>3) ಎ-3 ಹೇಮಂತ್ ಮುದ್ದಪ್ಪ<br>4) ಎ-4 ಪ್ರಸಿದ್ಧ ಶೆಟ್ಟಿ<br>5) ಎ-5 ರಾಬಿನ್ ಖಂಡೇಲ್ ವಾಲ<br>6)ಎ-6 ರಣಧೀರ್ ಆಶರ್<br>7)ಎ-7 ಸಿಯಾರಾಮ್ ಪಾಸ್ವನ್<br>8)ಎ-8 ಮಣಿಕಂಠ<br>9)ಎ-9 ಧನಪಾಲ್<br>10)ಎ-10 ಸತೀಶ್<br>11)ಎ-11 ಸೈಯದ್ ಯುಸಫ್<br>12)ಎ-12 ಎಸ್ ಎಂ ನಿಜಾಮುದ್ದಿನ್<br>13) ಎ-13 ಸುಶೀಲ್ ಚಂದ್ರ<br>14) ಎ-14 ವಿನಿತ್‌ಕುಮಾರ್<br>15)ಎ-15 ಕೃಷ್ಣ ಪಾಲ್<br>16)ಎ-16 ರತ್ನಾಕರ್<br>17) ಎ-17 ಭಾವನ ರತ್ನಾಕರ್ | 1)ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ಸುನೀಷ್ ಹೆಗಡೆ<br>3) ಎ-3 ಹೇಮಂತ್ ಮುದ್ದಪ್ಪ<br>4) ಎ-4 ಪ್ರಸಿದ್ಧ ಶೆಟ್ಟಿ<br>5) ಎ-5 ರಾಬಿನ್ ಖಂಡೇಲ್ ವಾಲ<br>6)ಎ-6 ರಣಧೀರ್ ಆಶರ್<br>7)ಎ-7 ಸಿಯಾರಾಮ್ ಪಾಸ್ವನ್<br>8)ಎ-8 ಮಣಿಕಂಠ<br>9)ಎ-9 ಧನಪಾಲ್<br>10)ಎ-10 ಸತೀಶ್<br>11)ಎ-11 ಸೈಯದ್ ಯುಸಫ್<br>12)ಎ-12 ಎಸ್ ಎಂ ನಿಜಾಮುದ್ದಿನ್<br>13) ಎ-13 ಸುಶೀಲ್ ಚಂದ್ರ<br>14) ಎ-14 ವಿನಿತ್‌ಕುಮಾರ್<br>15)ಎ-15 ಕೃಷ್ಣ ಪಾಲ್<br>16)ಎ-16 ರತ್ನಾಕರ್<br>17) ಎ-17 ಭಾವನ ರತ್ನಾಕರ್<br>18)ಎ-18 ರಾಜ್‌ಕುಮಾರ್<br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. |

| | | | |
|---|---|---|---|
| | | 18)ಎ-18 ರಾಜ್‌ಕುಮಾರ್<br>19)ಎ-19 ನಿತಿನ್ ಪುಂಡಲಿಕ ಮೆಶ್ರಾಮ್.<br>20)ಎ-20 ಪಟೇಲ್ ದರ್ಶಿತ್ ಕುಮಾರ್.<br>21)ಎ-21ಹರವಿಂದರ್ ಸಿಂಗ್<br>ಎ-18 ರಾಜ್‌ಕುಮಾರ್ ಕೇವಲ್ ಚಂದ್ ಸಂಕ್ಲೇಚ<br>ಎ-19 ನಿತಿನ್ ಪುಂಡಲೀಕ ಮೆಶ್ರಾಮ್<br>ಎ-20 ಪಟೇಲ್ ದರ್ಶಿತ್ ಕುಮಾರ್<br>ಎ-21 ಹರ್ವಿಂದರ್ ಸಿಂಗ್<br>ಎ-22 ವರ್ಧಮಾನ್ ವೈರ್‌ಸ್ & ಕೇಬಲ್ಸ್<br>ಎ-23 ಹೇಮರತ್ನ ಸ್ಟೀಲ್<br>ಎ-24 ಮನೀಶ್ ವಲ್ಲಭ್ ಜೀ ಗಾಲಾ<br>ಎ-25 ಹೇಮಂತ್ ರತನ್ ಶಿ ವಿಸಾರಿಯಾ<br>ಎ-26 ಕಾಂತಿಲಾಲ್ ಮೇಘ್ ಜೀ ಗಾಲಾ<br>ಎ-27 ಪ್ರಕಾಶ್ ಎಂಟರ್ ಪ್ರೈಸಸ್<br>ಎ-28 ಪ್ರಕಾಶ್ ಚಂದ್ ಖಿಲ್ವಾನಿ<br>ಎ-29 ಗ್ಲೋಬಲ್ ರಿಸೋರ್ಸಿಂಗ್<br>ಎ-30 ವಿಕಾಸ್ ಲೀಲಾಧರ್ ಅಗ್ರವಾಲ್<br>ಎ-31 ಶೀ ಬಾಲಾಜಿ ಸ್ಟೀಲ್ ಟ್ರೇಡರ್‌ಸ್,<br>ಎ-32 ಶ್ರೀ ಸಲಸಾರ್ ಸ್ಟೀಲ್ಸ್<br>ಎ-33 ಮನೋಜ್ ಕುಮಾರ್ ಜೈನ್ ಸುಖ್ ಅಸಾವಾ<br>ಎ-34 ಶ್ರೀ ಶ್ಯಾಮ್ ಸ್ಟೀಲ್ ಟ್ರೇಡರ್‌ಸ್<br>ಎ-35 ವಿಕ್ರಮ್ ಪವನ್ ಕುಮಾರ್ ಗುಪ್ತ<br>ಎ-36 ಸೇಫ್‌ವೆಲ್ಡ್ ಪ್ರೈವೇಟ್ ಲಿಮಿಟೆಡ್<br>ಎ-37 ಶ್ರೀಕಾಂತ್ ಚಂದ್ರಶೇಖರ್ ರುತಿಯಾ<br>ಎ-38 ಶ್ರೀಮತಿ ಶ್ರುತಿ ಶ್ರೀಕಾಂತ್ ರುತಿಯಾ<br>ಎ-39 ರಾಜರತನ್ ಟ್ರೇಡ್ ಲಿಂಕ್<br>ಎ-40 ಮಹೇಶ್ ಲಹೋಟಿ | ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ.<br>19)ಎ-19 ನಿತಿನ್ ಪುಂಡಲಿಕ ಮೆಶ್ರಾಮ್.<br>20)ಎ-20 ಪಟೇಲ್ ದರ್ಶಿತ್ ಕುಮಾರ್.<br>21)ಎ-21ಹರವಿಂದರ್ ಸಿಂಗ್<br>ವಿಶೇಷ ತನಿಖಾ ತಂಡದ ತನಿಖಾ ಕಾಲದಲ್ಲಿ ದಸ್ತಗಿರಿ ಮಾಡಿದ್ದು, ನ್ಯಾಯಾಲಯದ ಜಾಮೀನು ಪಡೆದಿರುತ್ತಾರೆ.<br><br>ಎ-22 ರಿಂದ ಎ-51 ರವರೆಗಿನ ಆರೋಪಿಗಳಿಗೆ ಕಲಂ 41(ಎ) ಸಿ.ಆರ್.ಪಿ.ಸಿ ನೋಟಿಸ್ ನೀಡಲಾಗಿದ್ದು, ಸದರಿಯವರು ತನಿಖಾಧಿಕಾಯವರ ಮುಂದೆ ವಿಚಾರಣೆಗೆ ಹಾಜರಾಗಿರುತ್ತಾರೆ. |

| | | | |
|---|---|---|---|
| | | ಎ-41 ಕಪಿಲ್ ಎಂಟರ್ ಪ್ರೈಸಸ್<br>ಎ-42 ಲಕ್ಷ್ಮಿ ನಾರಾಯಣ್ ಟ್ರೇಡಿಂಗ್<br>ಎ-43 ಮಹೇಶ್ ಕುಮಾರ್ ಅಗ್ರವಾಲ್<br>ಎ-44 ಲಕ್ಷ್ಯ ಎಂಟರ್ ಪ್ರೈಸಸ್<br>ಎ-45 ಶ್ರೀಮತಿ ಕವಿತ ಮಹೇಶ್ ಕುಮಾರ್ ಅಗ್ರವಾಲ್<br>ಎ-46 ಮಹೇಶ್ ಅನಜ್ ಭಂಡಾರ್<br>ಎ-47 ಶ್ರೀಮತಿ ದ್ರೌಪದಿ ನಾಥೂರಾಮ್ ಅಗ್ರವಾಲ್<br>ಎ-48 ಮಾ ಗಂಗಾ ಟ್ರೇಡರ್ಸ್<br>ಎ-49 ಕಪಿಲ್ ಕುಮಾರ್ ಅಗ್ರವಾಲ್<br>ಎ-50 ಅಗ್ರವಾಲ್ ಎಂಟರ್ ಪ್ರೈಸಸ್<br>ಎ-51 ವಿಜಯ್ ಗೋಕುಲ್ ಪ್ರಸಾದ್ ಅಗ್ರವಾಲ್ | |
| 8 | ಬೆಂಗಳೂರು ನಗರ ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂಖ್ಯೆ:302/2023 | ಕೆ.ಜಿನಗರ ಪೊಲೀಸ್ ಠಾಣೆ ಮೊ.ಸಂಖ್ಯೆ :91/2020 ರ ಪ್ರಕರಣದ ಹಿಂದಿನ ತನಿಖಾಧಿಕಾರಿಗಳು | ಎ-1 ಶ್ರೀಧರ್ ಕೆ. ಪೂಜಾರ್, ಡಿವೈಎಸ್ ಪಿ.<br>ತನಿಖಾ ಕಾಲದಲ್ಲಿ ಸಿಐಡಿಯ ಎಸ್ ಐಟಿ ವಿಚಾರಣೆಯಲ್ಲಿ ಬಂದಿಸಲಾಗಿದೆ |
| 9 | ಸಿಐಡಿ ಸಿಸಿಪಿಎಸ್ ಮೊ.ಸಂಖ್ಯೆ:01/2024 | ಎ-1 ಸಂತೋಷ್ ಕುಮಾರ್, ಸಿಇಒ, ಜಿಸಿಐಡಿ(ಖಾಸಗಿ ವ್ಯಕ್ತಿ).<br>2)ಎ-2 ಲಕ್ಷ್ಮೀಕಾಂತಯ್ಯ ಪೊಲೀಸ್ ಇನ್ಸ್‌ಪೆಕ್ಟರ್<br>3) ಎ-3 ಚಂದ್ರಾಧರ್ ಪೊಲೀಸ್ ಇನ್ಸ್‌ಪೆಕ್ಟರ್<br>4) ಎ-4 ಪ್ರಶಾಂತ್ ಬಾಬು ಪೊಲೀಸ್ ಇನ್ಸ್‌ಪೆಕ್ಟರ್<br>5) ಶ್ರೀಧರ್ ಕೆ. ಪೂಜಾರ್ ಡಿವೈಎಸ್‌ಪಿ. | ಎ-1 ರಿಂದ ಎ-4 ರವರನ್ನು ದಸ್ತಗಿರಿ ಮಾಡಿದ್ದು, ನ್ಯಾಯಾಲಯದ ಜಾಮೀನಿನ ಮೇಲಿರುತ್ತಾರೆ.<br>ಎ-5 ಶ್ರೀಧರ್ ಕೆ. ಪೂಜಾರ್, ಡಿವೈಎಸ್ ಪಿ. ಘನ ಉಚ್ಚ ನ್ಯಾಯಾಲಯದ ನಿರೀಕ್ಷಣಾ ಜಾಮೀನು ಪಡೆದಿರುತ್ತಾರೆ. |

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:624

## ಅನುಬಂಧ-2

| ಕ್ರಮ ಸಂಖ್ಯೆ | ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ | ಪ್ರಕರಣದ ಪ್ರಸ್ತುತ ಹಂತದ ಮಾಹಿತಿ | ದೋಷಾರೋಪ ಪಟ್ಟಿಯಲ್ಲಿರುವ ಅಂಶಗಳೇನು |
|---|---|---|---|
| 1 | ಬೆಂಗಳೂರು ನಗರ ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂಖ್ಯೆ:153/2020 | ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸಿಸಿ ಸಂಖ್ಯೆ:4623/2021 ರಲ್ಲಿ ದಿನಾಂಕ:19.10.2026 ರಂದು (ಅವೇಟ್) ನಿಗದಿಪಡಿಸಲಾಗಿರುತ್ತದೆ | ಶ್ರೀಕಿ ಮತ್ತು ರಾಬಿನ್ ಖಂಡೆಲ್ ವಾಲ ಮತ್ತು ಇತರರವರು ವಿವಿಧ ಆನ್ ಲೈನ್ ಗೇಮಿಂಗ್‌ನ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ ಅಕ್ರಮ ಲಾಭ ಗಳಿಸಿರುವ ಕುರಿತು. |
| 2 | ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ ಸಂಖ್ಯೆ:45/2020 | ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸಿಸಿ ಸಂಖ್ಯೆ:4226/2021 ರಲ್ಲಿ ದಿನಾಂಕ:23.10.2026 ರಂದು (ಕಾಲ್ ಆನ್) ನಿಗದಿಪಡಿಸಲಾಗಿರುತ್ತದೆ. | ಆರೋಪಿ ಶ್ರೀಕಿಯು ಪೋಕರ್ ಸೆಂಟ್ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿ ದತ್ತಾಂಶವನ್ನು ಬಳಸಿರುವ ಕುರಿತು ಆರೋಪ |
| 3 | ಬೆಂಗಳೂರು ನಗರ ಕೆ.ಜಿ ನಗರ ಪೊಲೀಸ್ ಠಾಣೆ ಮೊ.ಸಂಖ್ಯೆ:91/2020 | ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸ್ಪೆಷಲ್ ಸಿಸಿ ಸಂಖ್ಯೆ:187/2022 ರಲ್ಲಿ ದಿನಾಂಕ:25.09.2026 ರಂದು (ಸಮನ್ಸ್) ನಿಗದಿಪಡಿಸಲಾಗಿರುತ್ತದೆ | ವಿದೇಶದಿಂದ ಡಾರ್ಕ್ ನೆಟ್ ವೆಬ್‌ಸೈಟ್‌ಗಳ ಮೂಲಕ ನಿಷೇಧಿತ ಮಾದಕ ದ್ರವ್ಯ ಗಳನ್ನು ಬುಕ್ ಮಾಡಿ ಭಾರತೀಯ ಅಂಚೆ ಮೂಲಕ ಪಡೆದು ಬಳಸಲು ಪ್ರಯತ್ನಿಸಿರುವ ಬಗ್ಗೆ. |
| 4 | ಸಿಐಡಿ ಸಿಸಿಪಿಎಸ್ ಮೊ.ಸಂಖ್ಯೆ:09/2019 | ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸಿಸಿ ಸಂಖ್ಯೆ:35730/2021 ರಲ್ಲಿ ದಿನಾಂಕ:10.12.2026 ರಂದು (ಕಾಲ್ ಆನ್) ನಿಗದಿಪಡಿಸಲಾಗಿರುತ್ತದೆ. | ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಹ್ಯಾಕ್ ಮಾಡಿ ಅದರಿಂದ 11 ಕೋಟಿ 55 ಲಕ್ಷ ರೂಪಾಯಿಗಳನ್ನು ವರ್ಗಾವಣೆ ಮಾಡಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿರುವ ಕುರಿತು ಆರೋಪ |
| 5 | ಬೆಂಗಳೂರು ನಗರ ಅಶೋಕ ನಗರ ಪೊಲೀಸ್ ಠಾಣೆ ಮೊ.ಸಂಖ್ಯೆ:287/2020 | ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸಿಸಿ ಸಂಖ್ಯೆ:3529/2021 ರಲ್ಲಿ ದಿನಾಂಕ:25.11.2026 ರಂದು (ಕಾಲ್ ಆನ್) ನಿಗದಿಪಡಿಸಲಾಗಿರುತ್ತದೆ. | ಆರೋಪಿ ಶ್ರೀಕಿ ಮತ್ತು ರಾಬಿನ್ ಖಂಡೆಲ್ ವಾಲ ರವರು ಫಿರ್ಯಾದುದಾರರಿಂದ ಬಿಟ್ ಕಾಯಿನ್ ನಲ್ಲಿ ಹೂಡಿಕೆ ಮಾಡಿ ಲಾಭ ಮಾಡಿಕೊಡುವುದಾಗಿ ನಂಬಿಸಿ ಅವರಿಂದ 28 ಲಕ್ಷ ಗಳನ್ನು ಪಡೆದು ವಂಚನೆ ಮಾಡಿರುವ ಕುರಿತು ಆರೋಪ |
| 6 | ಬೆಂಗಳೂರು ನಗರ ಸೈಬರ್ ಕ್ರೈಂ | ಮಾನ್ಯ ನ್ಯಾಯಾಲಯಕ್ಕೆ | ಆರೋಪಿ ಶ್ರೀಕಿ ಪೋಕರ್ |

| | | | |
|---|---|---|---|
| | ಪೊಲೀಸ್ ಠಾಣೆ ಮೊ ಸಂಖ್ಯೆ:4801/2018 | ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸಿಸಿ ಸಂಖ್ಯೆ:34447/2025 ರಲ್ಲಿ ದಿನಾಂಕ:29.10.2026 ರಂದು (ಸಮನ್ಸ್) ನಿಗದಿಪಡಿಸಲಾಗಿರುತ್ತದೆ | ಬಾಜಿ ಎಂಬ ಆನ್ ಲೈನ್ ಗೇಮಿಂಗ್ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿ ಅಕ್ರಮವಾಗಿ ಹಣ ವರ್ಗಾವಣೆ ಮಾಡಿಕೊಂಡಿರುವ ಕುರಿತು ಆರೋಪ |
| 7 | ತುಮಕೂರು ನ್ಯೂ ಎಕ್ಸ್ ಟೆನ್ಷನ್ ಪೊಲೀಸ್ ಠಾಣೆ ಮೊ.ಸಂಖ್ಯೆ:85/2017 | ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು, ಸಿಸಿ ಸಂಖ್ಯೆ:121/2026 ರಲ್ಲಿ ದಿನಾಂಕ:24.08.2026 ರಂದು (ಸಮನ್ಸ್) ನಿಗದಿಪಡಿಸಲಾಗಿರುತ್ತದೆ | ಯುನೋಕಾಯಿನ್ ಕ್ರಿಪ್ಟೋ ಕರೆನ್ಸಿ ಎಕ್ಸ್ ಚೇಂಜ್ ಸರ್ವರ್ ಹ್ಯಾಕ್ ಮಾಡಿ ಬಿಟ್ ಕಾಯಿನ್ ಗಳು ಕಳುವು ಮಾಡಿಕೊಂಡು ಉಪಯೋಗಿಸಿಕೊಂಡಿರುವ ಬಗ್ಗೆ. |
| 8 | ಬೆಂಗಳೂರು ನಗರ ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂಖ್ಯೆ:302/2023 | ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲು ಸಕ್ಷಮ ಪ್ರಾಧಿಕಾರವು ಅಭಿಯೋಜನಾ ಮಂಜೂರಾತಿ ನೀಡದ ಕಾರಣ ಅಂತಿಮ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. | - |
| 9 | ಸಿಐಡಿ ಸಿಸಿಪಿಎಸ್ ಮೊ.ಸಂಖ್ಯೆ:01/2024 | ಪ್ರಕರಣದಲ್ಲಿ ಎ-2 ರಿಂದ ಎ-5 ಆರೋಪಿಗಳ ವಿರುಧ್ಧ ದೋಷಾರೋಪಣ ಪಟ್ಟಿ ಸಲ್ಲಿಸಲು ಸಕ್ಷಮ ಪ್ರಾಧಿಕಾರವು ಅಭಿಯೋಜನಾ ಮಂಜೂರಾತಿ ನೀಡದ ಕಾರಣ ಎ-1 ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ<br><br>ಸಿಸಿ ಸಂಖ್ಯೆ:39028/2026 ರಲ್ಲಿ ದಿನಾಂಕ:03.09.2026 ರಂದು (ಸಮನ್ಸ್) ನಿಗದಿಪಡಿಸಲಾಗಿರುತ್ತದೆ | ಆರೋಪಿ ಎ-1 ಸಂತೋಷ್ ಕುಮಾರ್ ಇತನು ಅಕ್ರಮವಾಗಿ ರಾಬಿಲ್ ಖಂಡೇಲ್ ವಾಲ ಕ್ರಿಪ್ಟೋ ವಾಲೆಟ್ ನಿಂದ ಅಕ್ರಮ ವಾಗಿ ಕ್ರಿಪ್ಟೋ ಕರೆನ್ಸಿಗಳನ್ನು ತನ್ನ ಸ್ವಂತ ಉಪಯೋಗಕ್ಕಾಗಿ ವರ್ಗಾವಣೆ ಮಾಡಿದ ಮತ್ತು ಬಿಟ್ ಕಾಯಿನ್ ಗಳ ಅಕ್ರಮ ವರ್ಗಾವಣೆ ಪ್ರಯತ್ನದಲ್ಲಿ ಸಹಕರಿಸಿರುವ ಬಗ್ಗೆ ಕುರಿತ ಆರೋಪ |